ಓ.ಎಸ್. ನಂ.12/2019

ಪಿಡಬ್ಲ್ಯೂ.1

ದಿಃ 03.11.2022

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲು ಪ್ರತಿವಾದಿ ಪರ ವಕೀಲರಿಂದಃ

ನಾನು 3 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಆಸ್ತಿಯು 14 ಗುಂಟೆ ಇದೆ. ಸದರಿ ದಾವಾ ಆಸ್ತಿಯ ಸರ್ವೆ ನಂಬರ್ 88. ಸದರಿ ದಾವಾ ಆಸ್ತಿಯ ಚೆಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ಸದರಿ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ವಸತಿ ಉಪಯೋಗಕ್ಕಾಗಿ ಭೂಪರಿವರ್ತನೆ ಆಗಿದೆ. ಸದರಿ ದಾವಾ ಆಸ್ತಿಯು ನನ್ನ ಸ್ವಾಧಿನದಲ್ಲಿದೆ. ಸದರಿ ದಾವೆಗೆ ದಾವಾ ಆಸ್ತಿಯು ನನ್ನ ಸ್ವಾಧಿನಲ್ಲಿದೆ ಎಂದು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸಾಕ್ಷಿಗೆ ಬಾಡಿಗೆ ಕರಾರು ಪತ್ರ ತೋರಿಸಲಾಗಿ, ಸದರಿ ದಾಖಲೆಯನ್ನು ತಾನು ಬರೆದುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಅದರಲ್ಲಿರುವ ದಾವಾಪೀರ್ ಎಂಬ ಸಹಿಯನ್ನು ಸಾಕ್ಷಿಯು ತನ್ನದಲ್ಲ ಎಂದು ನಿರಾಕರಿಸುತ್ತಾರೆ. ದಾವಾ ಷಡ್ಯೂಲ್ ಆಸ್ತಿಯಲ್ಲಿ ಪ್ರತಿವಾದಿಯು ಜಿ. ಜೆ. ಪೌಂಡ್ರಿ ನಡೆಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿಯನ್ನು ದಿನಾಂಕ 25.06.1999 ರಂದು ಪ್ರತಿವಾದಿಗೆ ಬಾಡಿಗೆ ಕರಾರು ಪತ್ರವನ್ನು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 01.02.1999 ರಂದು ದಾವಾ ಆಸ್ತಿಯ ಸ್ವಾಧಿನತೆಯನ್ನು ಪ್ರತಿವಾದಿಗೆ ಬಿಟ್ಟು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ರೂ.5000/ ಹಣವನ್ನು ಮುಂಗಡವಾಗಿ ನನಗೆ ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ಪ್ರತಿವಾದಿಯು 1999 ರಿಂದ ದಾವೆ ಸಲ್ಲಿಸುವ ವರೆಗೂ ಪ್ರತಿ ತಿಂಗಳು ರೂ.1000/ ಹಣವನ್ನು ಬಾಡಿಕೆ ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ನಾನು ಬಿರ್ಲಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ನನ್ನ ದಾವಾ ಆಸ್ತಿಯನ್ನು ನನ್ನ ತಮ್ಮ ಪ್ರತಿವಾದಿಗೆ ನಡೆಸಿಕೊಂಡು ಹೋಗಲು ಕೊಟ್ಟಿರುತ್ತೇನೆ, ಅದರಲ್ಲಿ ಬಂದ ಲಾಭದಲ್ಲಿ ಸ್ವಲ್ಪ ಹಣವನ್ನು ನನಗೆ ಕೊಡುತ್ತಿದ್ದ. ಸದರಿ ವಿಚಾರದ ಬಗ್ಗೆ ನನ್ನ ದಾವೆ ಮತ್ತು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುವ ಕಾಲಕ್ಕೆ ನಮ್ಮ ವಕೀಲರಿಗೆ ನಾನು ಹೇಳಿದ್ದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪ್ರತಿವಾದಿ ಮೆ// ಜಿ. ಜೆ ಪೌಂಡ್ರಿ, ಜೈ ಭೀಮ ನಗರ ಎಂಬ ಪೌಂಡರಿಯನ್ನು ನಡೆಸುತ್ತಿದ್ದನು ಎಂದರೆ ಸರಿ. ಸದರಿ ಪೌಂಡರಿಗೆ ಸಂಬಂಧಪಟ್ಟ ಕಚ್ಚಾ ಪದಾರ್ಥಗಳನ್ನು ತರುವುದು ಮತ್ತು ಕಂದಾಯವನ್ನು ಪಾವತಿ ಮಾಡುವುದು ಪ್ರತಿವಾದಿಯೆ ಮಾಡುತ್ತಿದ್ದನು. ಪ್ರತಿವಾದಿಯು ಆದಾಯ ತೆರಿಗೆಯನ್ನು ತುಂಬುತ್ತಿದ್ದ. 1999 ರಿಂದ ಸದರಿ ದಾವೆಯನ್ನು ಸಲ್ಲಿಸುವ ಮುಂಚಿತವಾಗಿ ಪ್ರತಿವಾದಿಯರ ವಿರುದ್ದ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ದಾವೆ ಸಲ್ಲಿಸುವ ಕಾಲಕ್ಕೆ ನಮ್ಮ ವಕೀಲರಿಗೆ ನಾನು ಮಾಹಿತಿ ನೀಡಿದ್ದೆ ಎಂದರೆ ಸರಿ. ಸಾಕ್ಷಿಗೆ ವಾದ ಪತ್ರವನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಒಪ್ಪಿಕೊಳ್ಳುತ್ತಾರೆ. ಸದರಿ ದಾವೆಯನ್ನು ನಾನು ಪ್ರತಿವಾದಿಯ ವಿರುದ್ದ ಸ್ವಾಧಿನತೆ ಮತ್ತು ಶಾಶ್ವತ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿರುತ್ತೇನೆ ಎಂದರೆ ಸರಿ. ದಿನಾಂಕ 29.07.2019 ರಂದು ಸದರಿ ಮಧ್ಯಂತರ ಅರ್ಜಿಯು ವಜಾ ಆಗಿದೆ ಎಂದರೆ ಸರಿ. ಸದರಿ ಮಧ್ಯಂತರ ಅರ್ಜಿಯು ವಾದಿಯು ಭೂ ಮಾಲೀಕ ಮತ್ತು ಪ್ರತಿವಾದಿಯು ಬಾಡಿಗೆದಾರನಾಗಿದ್ದು, ದಾವಾ ಆಸ್ತಿಯ ಸ್ವಾಧಿನತೆ ತೋರಿಸಿದ ಕಾರಣಕ್ಕಾಗಿ ವಜಾ ಆಗಿದೆ ಎಂದರೆ ಸರಿ. ದಾವಾ ಸಲ್ಲಿಸುವ ಕಾಲಕ್ಕೆ ವಾದ ಪತ್ರದಲ್ಲಿ ದಾವಾ ಆಸ್ತಿಯ ಮೌಲ್ಯ ರೂ. 5,00,000/ ಎಂದು ಬರೆಸಿದ್ದೇನೆ ಎಂದರೆ ಸರಿ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆಯನ್ನು ಹಾಜರುಪಿಡಿಸಿದ್ದಿಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಾವೆ ಸಲ್ಲಿಸುವ ಕಾಲಕ್ಕೆ ಸದರಿ ದಾವಾ ಆಸ್ತಿಯು ರೂ. 20 ರಿಂದ 25 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ

ದಾವಾ ಆಸ್ತಿಯಲ್ಲಿ ಪ್ರತಿವಾದಿಯ ಸ್ವಾಧಿನಲ್ಲಿದ್ದರೂ ಸಹ, ನನ್ನ ಸ್ವಾಧಿನಲ್ಲಿದೆ ಎಂದು ಸುಳ್ಳು ಹೇಳಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ಸದರಿ ಪೌಂಡರಿಯಲ್ಲಿರುವ ಯಂತ್ರೋಪಕರಣಗಳು ನನ್ನದು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿದ್ದೀಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಪೌಂಡರಿಗೆ ಸಂಬಂಧಪಟ್ಟ ಪರವಾನಿಗೆ ಪತ್ರವಾಗಲಿ, ಅನುಮೊದಿತ ನಕ್ಷೆಯನ್ನು ನಾನು ನಾಯ್ಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಪೌಂಡರಿಯನ್ನು ಕಟ್ಟಲು ಪರವಾನಿಗೆ ಪತ್ರವನ್ನು ನಗರ ಸಭೆಯಿಂದ ಪಡೆದುಕೊಂಡಿದ್ದೇನೆ.

ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ